3) ಶ್ರೀ ದುರ್ಗಮ್ಮ ತ್ಯಾಮಗೊಂಡು (ತ್ಯಾಮಗೊಂಡ್ಲು ಹೋ)		25,000
4) ಶ್ರೀ ಪೂಜಮ್ಮ ದಾಳಮ್ಮ ದೊಡ್ಡೇರಿ, ತ್ಯಾಮಗೊಂಡ್ಲು ಹೊ		25,000
		1,10,000

8)ದೇವನಹಳ್ಳಿ ತಾಲ್ಲೂಕು

1) ಶ್ರೀ ಅಂಜನೇಯಸ್ವಾಮಿ, ದೊಡ್ಡಕುರುಬರಹಳ್ಳಿ ಕಸಬಾ ಹೋಬಳಿ		15,000
2) ಶ್ರೀ ಸಣ್ಣಮುನೇಶ್ವರ ಸ್ವಾಮಿ, ಕನ್ನಮಂಗಲ ಕಸಬಾ ಹೋಬಳಿ		15,000
3) ಶ್ರೀ ಮುನೇಶ್ವರ ದೇವನಹಳ್ಳಿ, ಕಸಬಾ ಹೋಬಳಿ		20,000
4) ಶ್ರೀ ಮದ್ದೂರಮ್ಮ ದೇವಸ್ಥಾನ, ಅರವೇಶನಹಳ್ಳಿ ಕುಂದಾಣ ಹೋಬಳಿ		18,000
5) ಶ್ರೀ ದುರ್ಗಮ್ಮ ದೇವಸ್ಥಳನ, ಬ್ಯಾಡರಹಳ್ಳಿ, ಕುಂದಾಣ ಹೋಬಳಿ		16,000
6) ಶ್ರೀ ಮದ್ದೂರಮ್ಮ ದೇವಸ್ಥಳನ, ವಿಶ್ವನಾಥಪುರ	"	16,000
7) ಶ್ರೀ ಪಟಾಲಮ್ಮ ದೇವಸ್ಥಾನ, ಕಬ್ಬನ್‌ಹಳ್ಳಿ	"	16,000
8) ಶ್ರೀ ಮಾರಮ್ಮ ದೇವರು, ಬೆಟ್ಟನಹಳ್ಳಿ	"	16,000
9) ಶ್ರೀ ಮುತ್ಯಾಲಮ್ಮ ಸುಣ್ಣಘಟ್ಟ	"	16,000
10)ಶ್ರೀ ತಳೇತಿಮ್ಮ ದೇವಸ್ಥಾನ, ಸಿಂಗ್ರಹಳ್ಳಿ	"	16,000
11)ಶ್ರೀ ಅಂಜನೇಯಸ್ವಾಮಿ, ಭೈರಾಪುರ, ವಿಜಯಪುರ	ಹೋಬಳಿ	16,000
12)ಶ್ರೀ ಮುತ್ಯಾಲಮ್ಮ ಹಾರೋಹಳ್ಳಿ	"	10,000
13)ಶ್ರೀ ಅಂಜನೇಯ, ಹಾರೋಹಳ್ಳಿ		10,000
		2,00,000

ಮಂಚನ ಬೆಲೆ ಯೋಜನೆಯಡಿ ನಿರಾಶ್ರಿತ ಕುಟುಂಬಗಳಿಗೆ ಜಮೀನು ಮತ್ತು ಪುನರ್ವಸತಿ.

618 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಚನಬೆಲೆ ಅಣೆಕಟ್ಟೆಗಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಯ ವಿಸ್ತೀರ್ಣವೆಷ್ಟು?

ಆ) ಈ ಅಣೆಕಟ್ಟೆಗಾಗಿ ಜಮೀನನ್ನು ಕಳೆದುಕೊಂಡಿರುವ ಕುಟುಂಬಗಳೆಷ್ಟು?

ಇ) ಇವರಲ್ಲಿ ನೆಲಮಂಗಲಕ್ಕೆ ಸೇರಿದ ದಾಸನಪುರ ಹೋಬಳಿ ಕಡಬಗೆರೆ ಗ್ರಾಮದ ಕುಟುಂಬಗಳೆಷ್ಟು?

ಈ) ಈ ಮೇಲ್ಕಂಡ ಯೋಜನೆಯಿಂದ ಜಮೀನು ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರವು ಪುನರ್ವಸತಿ ಹಾಗೂ ಜಮೀನನ್ನು ಮಂಜೂರಾಡಲಾಗಿದೆಯೇ? (ವಿವರವನ್ನೊದಗಿಸುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಈ ಅಣೆಕಟ್ಟೆಗಾಗಿ 434ಎಕರೆ 16ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ.

ಆ) ಈ ಆಣೆಕಟ್ಟೆಗಾಗಿ 192 ಕುಟುಂಬಗಳು ಜಮೀನನ್ನು ಕಳೆದುಕೊಂಡಿರುತ್ತಾರೆ.

ಇ) ಇಲ್ಲ

ಈ) ಈ ಯೋಜನೆಯಿಂದ ಜಮೀನು ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರವು ಪುನರ್ವಸತಿ ಹಾಗೂ ಜಮೀನನ್ನು ಮಂಜೂರು ಮಾಡಲಾಗಿದ್ದು, ಇದಕ್ಕೆ ಸಂಬಂಧಪಟ್ಟ ಪೂರ್ಣ ವಿವರಗಳು ಈ ಕೆಳಕಂಡಂತಿರುತ್ತೆ.

ಮುಳುಗಡೆಯಾದ ಗ್ರಾಮದ ಹೆಸರು	ಒಟ್ಟು ನಿರಾಶ್ರಿತ ಕುಟುಂಬಗಳ ಸಂಖ್ಯೆ	ಮಂಜೂರಾದ ಒಟ್ಟು ಜಮೀನು	ಯಾವ ಗ್ರಾಮದಲ್ಲಿ ಮಂಜೂರಾಗಿದೆ
1. ವಾಡಳ್ಳಿ	50	125-00	ಚೋಳನಾಯ್ಕನಹಳ್ಳಿ
2. ಅವ್ವೇರಹಳ್ಳಿ	23	43-00	ಅವ್ವೇರಹಳ್ಳಿ
	16	24-00	ವರ್ತೂರು
	17	28-00	ಕಡಬಗೆರೆ
	79	122-00	ಕೋಲೂರು
3. ವೀರಾಪುರ	30	49-30	ಕಡಬಗೆರೆ
ನೈಟುಗಳ ಏಂಗಡಣೆ			
1. ಅವ್ವೇರಹಳ್ಳಿ	65	ಕೋಲೂರು	
	14	ವರ್ತೂರು	
	14	ಕಡಬಗೆರೆ	
	61	ಅವ್ವೇರಹಳ್ಳಿ	
2 ವೀರಾಪುರ	27	ಕಡಬಗೆರೆ	

ರಾಜ್ಯದಲ್ಲಿ ಅರಣ್ಯಕ್ಕೆ ಸೇರಿದ ಜಮೀನುಗಳ ಒತ್ತುವರಿ

652 - ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯಕ್ಕೆ ಸೇರಿದ ಭೂಮಿಯನ್ನು ಇದುವರೆವಿಗೂ ಒತ್ತುವರಿ ಮಾಡಿದ ವಿಸ್ತೀರ್ಣ ಎಷ್ಟು, ಇದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಾಂಗದವರ ಭೂಮಿಯೆಷ್ಟು?

ಆ) ನೆಲಮಂಗಲ ಕ್ಷೇತ್ರದ ಅರಣ್ಯ ಹಾಗೂ ಕೆರೆ ಅಂಗಳಕ್ಕೆ ಸೇರಿದ ಎಷ್ಟು ಎಕರೆ ಪ್ರದೇಶವನ್ನು ಸಾರ್ವಜನಿಕರು ಒತ್ತುವರಿ ಮಾಡಿರುತ್ತಾರೆ?

ಇ) ಅದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಾಂಗದವರು ಉಳುಮೆ ಮಾಡುತ್ತಿರುವ ಭೂಮಿಯ ವಿಸ್ತೀರ್ಣವೆಷ್ಟು?

ಈ) ಹಾಗಿದ್ದಲ್ಲಿ, ಈ ಜನರು ಉಳುಮೆ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) 1,63,777-34 ಎಕರೆಗಳು

ಪರಿಶಿಷ್ಟ ಜಾತಿ 57510-06 ಎಕರೆಗಳು